6.	ಬ್ರಹ್ಮಾವರ	1.25	4.00	4.20	0.80	2.80
7.	ಬಂಟ್ವಾಳ	6.70	14.40	6.00	6.10	17.00
8.	ವಿಟ್ಲ	3.00	8.75	2.35	1.95	1.10
9.	ಪುತ್ತೂರು	4.75	5.30	0.85	2.73	24.90
10.	ಸುಳ್ಯ	0.30	4.25	1.30	-	42.55
11.	ಕುಂದಾಪುರ	3.03	15.26	4.04	4.96	38.20
12.	ಬೈಂದೂರು	17.62	9.42	4.27	0.55	37.45
13.	ಮಂಗಳೂರು	2.95	7.85	1.50	0.20	-
14.	ಉಳ್ಳಾಲ	8.30	11.20	1.95	2.60	20.30
15.	ಸುರತ್ಕಲ್	3.10	2.70	3.40	-	17.50
		77.60	123.55	45.46	36.46	305.65

ವಿಷಯ : ಉಳ್ಳಾಲ ಸಮುದ್ರ ಕೊರೆತಕ್ಕೆ ತಡೆಗೋಡೆ ನಿರ್ಮಾಣದ ಖರ್ಚು.

Q : 1644

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಳ್ಳಾಲ ಕ್ಷೇತ್ರದಲ್ಲಿ ಸಮುದ್ರ ಕೊರೆತ ತಡೆಗಟ್ಟುವ ತಡೆಗೋಡೆಗಾಗಿ ಪ್ರಾರಂಭ ದಿಂದ 1992ನೇ ಡಿಸೆಂಬರ್ ಅಖೈರ್‌ವರೆಗೆ ಬಿಡುಗಡೆಯಾದ ಹಣವೆಷ್ಟು (ವರ್ಷಂ ಪ್ರತಿ ಖರ್ಚಾದ ಹಣದ ಮಾಹಿತಿ ನೀಡುವುದು)

ಆ) ಉಳ್ಳಾಲದಲ್ಲಿ ಈವರೆಗೆ ಎಷ್ಟು ಮೀಟರ್ ತಡೆಗೋಡೆ ಪೂರ್ತಿಯಾಗಿದೆ; ಎಷ್ಟು ಅರ್ಧದಲ್ಲಿದೆ ಹಾಗೂ ಎಷ್ಟು ಬಾಕಿ ಇದೆ;

ಇ) ಸಮುದ್ರ ಕೊರೆತ ಜೋರಾಗಿರುವುದರಿಂದ ತಡೆಗೋಡೆ ಕೆಲಸ ಈ ರೀತಿ ಮಂದಗತಿಯಿಂದ ನಿಧಾನವಾಗುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಈ) ತಡೆಗೋಡೆ ಕೆಲಸದಲ್ಲಿ ಉತ್ತಮ ನಿರ್ವಹಣೆ ಆಗಿಲ್ಲ. ಗುತ್ತಿಗೆದಾರರು ಚೆನ್ನಾಗಿ ಕೆಲಸ ನಿರ್ವಹಿಸಿಲ್ಲ ಎಂಬ ದೂರು ಸರ್ಕಾರಕ್ಕೆ ಬಂದಿದೆಯೇ;

ಉ) ಈ ತಡೆಗೋಡೆ ಕೆಲಸವನ್ನು ತುರ್ತಾಗಿ ಮಾಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಡಾ॥ ಆರ್. ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು) :

ಅ) ಉಳ್ಳಾಲ ಕ್ಷೇತ್ರದಲ್ಲಿ ಸಮುದ್ರ ಕೊರೆತ ತಡೆಗೋಡೆಗಾಗಿ ಡಿಸೆಂಬರ್ 92ರವರೆಗೆ ಆದ ಖರ್ಚು ಈ ಕೆಳಕಂಡಂತಿದೆ;

ಕ್ರಮ ಸಂಖ್ಯೆ	ವರ್ಷ	ವೆಚ್ಚ (ಲಕ್ಷ ರೂ.ಗಳಲ್ಲಿ)
1.	1990 - 91	23.99
2.	1991 - 92	57.46
3.	1992 - 93 (12:92ರವರೆಗೆ)	50.26
	ಒಟ್ಟು	131.71

ಆ) 450 ಮೀ. ಪೂರ್ಣಗೊಂಡಿದೆ.
430 ಮೀ. ಪೂರ್ಣಗೊಳ್ಳುವ ಹಂತದಲ್ಲಿವೆ.
1430 ಮೀ. ಪ್ರಗತಿ ಹಂತದಲ್ಲಿದೆ.
ಇ) ಕಾಮಗಾರಿಗಳು ತೀವ್ರವಾಗಿ ನಡೆಯುತ್ತಿದೆ.
ಈ) ಇಲ್ಲ.
ಉ) ಕೈಗೊಳ್ಳಲಾಗುವುದು.

ವಿಷಯ : ಲೋಕೋಪಯೋಗಿ ಇಲಾಖೆಯಲ್ಲಿ ಲೋಕಾಯುಕ್ತದ ವಿಚಾರಣೆಗೊಳಪಟ್ಟವರ ಸಂಖ್ಯೆ.

Q : 841

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಲೋಕೋಪಯೋಗಿ ಇಲಾಖೆಯಲ್ಲಿರುವ (ಕಾರ್ಯಪಾಲಕ ಅಭಿಯಂತರರು ಹಾಗೂ ಮುಖ್ಯ ಇಂಜಿನಿಯರ್‌ಗಳನ್ನೊಳಗೊಂಡ) ಲೋಕಾಯುಕ್ತದ ವಿಚಾರಣೆಗೆ ಒಳಗಾಗಿರುವ ಅಧಿಕಾರಿಗಳ ಸಂಖ್ಯೆ ಎಷ್ಟು? (ಅವರ ಹೆಸರು ಮತ್ತು ಮೊಕದ್ದಮೆಗಳ ವಿವರ ನೀಡುವುದು)
ಆ) ಈ ಇಲಾಖೆಯವರು ಲೋಕಾಯುಕ್ತದ ಜೊತೆ ಸಹಕರಿಸದಿರುವುದು ವಿಚಾರಣೆಯು ಮಂದಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?
ಇ) ಹಾಗಿದ್ದಲ್ಲಿ ಅಂತಹವರ ಮೇಲೆ ಸರ್ಕಾರವು ಕೈಗೊಂಡ ಕ್ರಮಗಳೇನು?
ಈ) ಲೋಕಾಯುಕ್ತರ ತೀರ್ಪಿನಂತೆ ತಪ್ಪಿತಸ್ಥರೆಂದು ಪರಿಗಣಿಸಲಾಗಿರುವ ಅಧಿಕಾರಿಗಳು ಯಾರ್ಯಾರು? ಹಾಗೂ ಅವರ ವಿರುದ್ಧ ಸರ್ಕಾರವು ಶಿಸ್ತಿನ ಕ್ರಮ ಜರುಗಿಸಿರುವವರ ಸಂಖ್ಯೆ ಎಷ್ಟು ? ಹಾಗೂ ಕ್ರಮ ಕೈಗೊಳ್ಳಬೇಕಾಗಿರುವವರ ಸಂಖ್ಯೆ ಎಷ್ಟು? (ಪ್ರತ್ಯೇಕ ಪೂರ್ವ ವಿವರ ನೀಡುವುದು)

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) 52, ಅವರ ವಿವರಗಳನ್ನು ಅನುಬಂಧ - 1ರಲ್ಲಿ ನೀಡಿದೆ.
ಆ) ಇಲ್ಲ.
ಇ) ಉದ್ಭವಿಸುವುದಿಲ್ಲ.
ಈ) 1) ತಪ್ಪಿತಸ್ಥ ಅಧಿಕಾರಿಗಳ ವಿವರವನ್ನು ಅನುಬಂಧ-2ರಲ್ಲಿ ನೀಡಿದೆ.
2) ಶಿಸ್ತಿನ ಕ್ರಮ ಜರುಗಿಸಿರುವವರ ಸಂಖ್ಯೆ : 7
3) ಕ್ರಮ ಕೈಗೊಳ್ಳಬೇಕಾದವರ ಸಂಖ್ಯೆ : 3